ದಿಃ **27-07-2024** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ **03** ಮತ್ತು **04** ಪರ ಶ್ರೀ. **GGI** ವಕೀಲರವರಿಂದಃ

ನಾನು ದ್ವಿತೀಯ ಪಿ.ಯು.ಸಿ ಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಆಸ್ತೀಗಳನ್ನು ಹೊರತು ಪಡೆಸಿ ನಮ್ಮ ಕಟುಂಬಗಳ ಇನ್ನುಳಿದ ಬೇರೆ ಆಸ್ತೀಗಳು ಇವೆ ಎಂದರೆ ಎಂದರೆ ಸರಿ. ದಾವಾ ಆಸ್ತೀಗಳು ಮತ್ತು ಇನ್ನುಳಿದ ಬೇರೆ ಆಸ್ತೀಗಳು ನನ್ನ ಅಜ್ಜನಿಗೆ ಸೇರಿದ್ದವು. ಕೊಟ್ಟುರ ಗೌಡ ಎಂಬುವವರು ನನ್ನ ತಂದೆಯಾಗಬೇಕು. ನನ್ನ ತಂದೆಗೆ **05** ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು. ನನ್ನ ಹಾಗೂ ನನ್ನ **6** ಜನ ವಡಹುಟ್ಟಿದವರ ಮಧ್ಯ ದಾವಾ ಆಸ್ತೀಗಳು ಹಾಗೂ ಇನ್ನುಳಿದ ಆಸ್ತೀಗಳಿಗೆ ಸಂಬಂಧಿಸಿದಂತೆ ಪಾಲು ವಿಭಾಗ ಅಥವಾ ಪಾಲು ಪಟ್ಟಿ ಆಗಿರುವುದಿಲ್ಲ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ಮತ್ತು ಸಹೋದರರ ಹೆಸರಿನಲ್ಲಿ ಹಕ್ಕು ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತೀಯ ಪಹಣಿ ಪತ್ರಿಕೆಯನ್ನು ನಾನು ನೋಡಿರುತ್ತೇನೆ. ದಾವಾ ಆಸ್ತೀಗಳು ದಾವಾ ಹೂಡುವ ಸಮಯದಲ್ಲಿ ಸಂಗನಗೌಡರವರ ಹೆಸರಿನಲ್ಲಿ ಇರುತ್ತದೆ. ಸಂಗನಗೌಡರವರು **01** ನೇ ಪ್ರತಿವಾದಿಯ ಗಂಡ ಎಂದರೆ ಸರಿ. ನಾನು ವಾದ ಪತ್ರದಲ್ಲಿ ಪಾಲು ವಿಭಾಗದ ಮುಖಾಂತರ ದಾವಾ ಆಸ್ತೀಗಳು ಸಂಗನಗೌಡರವರಿಗೆ ಹೋಗಿದೆ ಎಂದು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ.

**02.** ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ನನ್ನ ಪ್ರಮಾಣ ಪತ್ರದ **04** ನೇ ಪ್ಯಾರಾದಲ್ಲಿ "ನನ್ನ ತಂದೆಯ ಕೊಟ್ಟುರಗೌಡ ಪಾಟೀ ಜೀವಂತ ಇದ್ದಾಗ ಸದರಿ ದಾವಾದ ಆಸ್ತೀಗಳನ್ನು ಮನೆತನ ನಡೆಸುವ ಸಲುವಾಗಿ ಒಂದು ಪಾಲು ವಿಭಾಗ ಮಾಡಿದ್ದರು" ಅನ್ನು ಸಾಕ್ಷಿಯು ಹೌದು ಎಂದು ನುಡಿದಿದ್ದು ಈ ಹೇಳಿಕೆಯನ್ನು ನಿ.ಪಿ.ಡಿ.**01** ಎಂದು ಗುರುತಿಸಲಾಗಿದೆ. ಈ ಪಾಲು ವಿಭಾಗದಲ್ಲಿ ನನ್ನ ತಾಯಿಗೆ ಒಂದು ಜಮೀನು ಬಂದಿರುತ್ತದೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಂಗನಗೌಡರವರು ತೀರಿಕೊಳ್ಳುವ ಸಮಯದಲ್ಲಿ ದಾವಾ ಆಸ್ತೀಗಳು ಅವರ ಹೆಸರಿನಲ್ಲಿ ಇದ್ದವು ಎಂದರೆ ಸರಿ. ಸಂಗನಗೌಡರು ತೀರಿಕೊಂಡ ನಂತರ ಅವರಿಗೆ ಮಕ್ಕಳಿಲ್ಲದ ಕಾರಣ ಪ್ರತಿವಾದಿ **01** ರವರ ಹೆಸರಿನಲ್ಲಿ ದಾವಾ ಆಸ್ತೀಗಳು ಹಕ್ಕು ಬದಲಾವಣೆ ಆಗಿರುತ್ತವೆ ಎಂದರೆ ಸರಿ. ಪ್ರತಿವಾದಿ **01** ರವರ ಹೆಸರಿನಲ್ಲಿ ದಾವಾ ಆಸ್ತೀಗಳ ಹಕ್ಕು ಬದಲಾವಣೆ ಕಾಲಕ್ಕೆ ನಾನು ಮತ್ತು ನಮ್ಮ ತಾಯಿ ತಕರಾರನ್ನು ಸಲ್ಲಿಸಿರುವುದಿಲ್ಲ ಸಾಕ್ಷಿಯು ಮುಂದುವರೆದು ನನ್ನ ಅಣ್ಣ ಚೆನ್ನಬಸವನಗೌಡರವರು ತಕರಾರನ್ನು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಚೆನ್ನಬಸವನಗೌಡ ರವರು ಸಲ್ಲಿಸಿದ ತಕರಾರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಈ ಮಾತು ಸುಳ್ಳು ಎಂದರೆ

ಸರಿಯಲ್ಲ. ಸಂಗನಗೌಡರವರು ಜೀವಂತವಿದ್ದಾಗ ದಾವಾ ಆಸ್ತೀಗಳನ್ನು ಅವರೆ ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಜಂಟಿ ಕುಟುಂಬದ ಆಸ್ತೀ ಇದ್ದರಿಂದ ನನ್ನ ಅಣ್ಣ ಬಸವನಗೌಡ ರವರು ಸಾಗುವಳಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆಯ ಕಾಲದಿಂದಲೂ ನನ್ನ ಎಲ್ಲ ಅಣ್ಣಂದಿರು ಹಾಗೂ ನನ್ನ ತಾಯಿ ಪ್ರತ್ಯೇಕವಾಗಿ ಜಮೀನುಗಳನ್ನು ಹೊಂದಿ ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವ ಪಾಲು ವಿಭಾಗವು ಸಂಪೂರ್ಣವಾಗಿ ಜಾರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಪಾಲು ವಿಭಾಗದ ಪ್ರಕಾರ ಎಲ್ಲಾ ಆಸ್ತೀಗಳು ಭಾಗವಾಗಿ ನಾವು ವಿಭಕ್ತ ಕುಟುಂಬದ ಸದಸ್ಯರು ಎಂದರೆ ಸರಿಯಲ್ಲ. ಸಂಗನಗೌಡರು ತೀರಿಕೊಂಡ ನಂತರ ಪ್ರತಿವಾದಿ **01** ರವರಿಗೆ ದಾವಾ ಆಸ್ತೀಗಳ ಹಕ್ಕು ಬದಲಾವಣೇ ಆಗಿ ಪ್ರತಿವಾದಿ **01** ರವರು ಸಂಪೂರ್ಣ ಮಾಲೀಕರು ಎಂದರೆ ಸಾಕ್ಷಿಯು ಪಾಲು ವಿಭಾಗ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

**03.** ಸಂಗನಗೌಡರವರು ಕೃಷಿ ಮೇಲೆ ಅವಲಂಬಿತವಾಗಿ ಜೀವನ ನಡೆಸುತ್ತಿದ್ದರು ಎಂದರೆ ಸಾಕ್ಷಿಯು ಅವರು ಬಳ್ಳಾರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಸಂಗನಗೌಡ ರವರು ಬಳ್ಳಾರಿಯಲ್ಲಿ ನನ್ನ ಅಕ್ಕನ ಗಂಡನ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಸಂಗನಗೌಡರವರು ಸದರಿ ಕಛೇರಿಯಲ್ಲಿ ಕೆಲಸ ಮಾಡುವ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಪ್ರತಿವಾದಿ **01** ರವರು ಯಾವ ಕಾಯಿಲೆಯಿಂದ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸಂಗನಗೌಡರವರು ತೀರಿಕೊಂಡ ನಂತರ ಪ್ರತಿವಾದಿ **01** ರವರಿಗೆ ಜೀವನ ನಿರ್ವಹಣೆಗೆ ಕಷ್ಟ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ **01** ರವರು ಪ್ರತಿವಾದಿ **03** ರವರಿಗೆ ಮಾಡಿಕೊಟ್ಟಂತಹ ಖರೀದಿ ಪತ್ರಗಳನ್ನು ನಾನು ನೋಡಿರುವುದಿಲ್ಲ. ಎಷ್ಟು ಪ್ರತಿಫಲಕ್ಕೆ ಪ್ರತಿವಾದಿ **01** ರವರು ಪ್ರತಿವಾದಿ **03** ರವರಿಗೆ ಖರೀದಿ ಕೊಟ್ಟಿದ್ದು ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ **01** ರವರು ಸಾಯುವ ಸಮಯದಲ್ಲಿ ಹಾಸಿಗೆ ಹಿಡಿದಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ **01** ರವರು ಅವರ ಜೀವನ ನಿರ್ವಹಣೆಗಾಗಿ ಪ್ರತಿವಾದಿ **02** ರವರನ್ನು **GPA** ದಾರರನ್ನಾಗಿ ಮಾಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ **02** ರವರು ಪ್ರತಿವಾದಿ **01** ರವರ ಜೀವನ ನಿರ್ವಹಣೆಗೋಸ್ಕರ ದಾವಾ ಆಸ್ತೀ ಸರ್ವೇ ನಂಬರ **177** ಪೈಕಿ **04** ಎಕರೆ **85** ಸೆಂಟ್ಸ್ ಅನ್ನು ಪ್ರತಿವಾದಿ **03** ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಅಥವಾ ನನ್ನ ತಾಯಿಯಾಗಲಿ ನೊಂದಾಯಿತ **GPA** ಅಂತಾ ಪ್ರತಿವಾದಿ **02** ರವರನ್ನು ನೇಮಕ ಮಾಡಿದ್ದರ

ಬಗ್ಗೆ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ ಮತ್ತು ಆದರ ಬಗ್ಗೆ ಯಾವುದೇ ನೋಟಿಸನ್ನು ಪ್ರತಿವಾದಿ **01** ಮತ್ತು **02** ರವರಿಗೆ ನೀಡಿರುವುದಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಿ ಪಾಟೀ ಸವಾಲನ್ನು ಮುಂದುಡಲಾಯಿತು.**

*(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)*

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"

**Sd/-**

( ಶ್ರೀಮತಿ ಅಕ್ಷತಾ ಟಿ )

ದಿವಾಣಿ ನ್ಯಾಯಾಧೀಶರು,

ಹಡಗಲಿ.